ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಕುಮಾರಸ್ವಾಮಿ ಬಡಾವಣೆಯಲ್ಲಿನ ರಸ್ತೆಗಳಿಗೆ ನಮೂದಿಸಿರುವ ಸಂಖ್ಯೆಗಳ ಬಗ್ಗೆ

ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ):-

1312 (1450) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣಗೊಂಡಿರುವ ಕುಮಾರಸ್ವಾಮಿ ಬಡಾವಣೆಯನ್ನು ಒಂದನೇ ಹಂತ ಹಾಗೂ ಎರಡನೇ ಹಂತವಾಗಿ ವಿಭಜಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸದರಿ ಬಡಾವಣೆಯ ಒಂದನೇ ಹಾಗೂ ಎರಡನೇ ಹಂತದಲ್ಲಿ ಒದಗಿಸಿರುವ ನಿವೇಶನಗಳ ಸಂಖ್ಯೆಗಳನ್ನು ಒದಗಿಸುವುದು;

(ಇ) ಇಲ್ಲಿನ ಬಡಾವಣೆಯಲ್ಲಿ ನಮುದಿಸಿರುವ ರಸ್ತೆಗಳ ಸಂಖ್ಯೆ ಸರಿ ಇದೆಯೇ; ಇದ್ದರೆ ಅವುಗಳ ಮಾಹಿತಿಯನ್ನು ಒದಗಿಸುವುದು;

(ಈ) ವಾಸವಿ ಆಸ್ಪತ್ರೆಯ ಹತ್ತಿರವಿರುವ 69ನೇ ಅಡ್ಡರಸ್ತೆಯ ಅರ್ಧ ಭಾಗ ಒಂದನೇ ಹಂತ ಹಾಗೂ ಇನ್ನುಳಿದ ಅರ್ಧ ಭಾಗ ಎರಡನೇ ಹಂತಕ್ಕೆ ಸೇರಿರುವುದಾಗಿ ನಾಮ ಫಲಕವನ್ನು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಈ ರೀತಿಯಾಗಿ ನಾಮಫಲಕದಲ್ಲಿ ನಮೂದಿಸಿರುವುದರ ಬಗ್ಗೆ ಸಂಪೂರ್ಣ ವಿವರಗಳನ್ನು ಒದಗಿಸುವುದು?